ಕರ್ನಾಟಕ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1698
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	14.03.2022
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಾಗೂ ಶೈಕ್ಷಣಿಕ ಮಟ್ಟ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	• ಸರ್ಕಾರಿ ಶಾಲೆಗಳ ಶೈಕ್ಷಣಿಕ ಮಟ್ಟ ಉತ್ತಮಪಡಿಸಲು ಈ ಕೆಳಗಿನ ಕ್ರಮಗಳನ್ನು ವಹಿಸಲಾಗುತ್ತಿದೆ. • ಕರ್ನಾಟಕ ಪಬ್ಲಿಕ್ ಶಾಲೆಗಳ ಸ್ಥಾಪನೆಯೊಂದಿಗೆ ಪೂರ್ವ ಪ್ರಾಥಮಿಕ ಶಿಕ್ಷಣದಿಂದ 12ನೇ ತರಗತಿಯವರಿಗೆ ಒಂದೇ ಸಂಕೀರ್ಣದಲ್ಲಿ ಶಾಲಾ ವ್ಯವಸ್ಥೆಯನ್ನು ರೂಪಿಸಿಲಾಗಿದೆ. • 4000 ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದಲೇ ಆಂಗ್ಲ ಭಾಷಾ ಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ. • 1ನೇ ತರಗತಿಯಿಂದ 12 ನೇ ತರಗತಿಯವರೆಗೆ CBSE ಪಠ್ಯಕ್ರಮಕ್ಕೆ ಸಮನಾದ ಪಠ್ಯಕ್ರಮ ಜಾರಿಗೊಳಿಸಲಾಗಿದೆ. • ನಿರಂತರವಾಗಿ ಶಿಕ್ಷಕರು ಹಾಗೂ ಸಾಮಾರ್ಥ್ಯಾಧಾರಿತ (ಗಣಕ ಶಿಕ್ಷಣ ಕೌಶಲವು ಒಳಗೊಂಡಂತೆ) ತರಬೇತಿಗಳನ್ನು ಒದಗಿಸಿ ಅವರ ವೃತ್ತಿ ಸಾಮಾರ್ಥ್ಯಗಳನ್ನು ವೃದ್ಧಿಸಲಾಗಿದೆ. • ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳ ಕಲಿಕಾ ಸಾಮಾರ್ಥ್ಯವನ್ನು ವೃದ್ಧಿಸಲು ಪೂರಕವಾಗಿ ಮಧ್ಯಾಹ್ನದ ಉಪಹಾರ ಕ್ಷೀರಭಾಗ್ಯ, ಬಾಳೆಹಣ್ಣು

		ಅಥವಾ ಮೊಟ್ಟೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ. ಈ ಮುಖಾಂತರ ಅವರಲ್ಲಿನ ಅಪೌಷ್ಟಿಕತೆಯನ್ನು ನೀಗಿಸಿ ಕಲಿಕಾ ಸಾಮರ್ಥ್ಯವನ್ನು ವೃದ್ಧಿಸುತ್ತದೆ. • ಒಂದನೇ ತರಗತಿಯಿಂದ ಹತ್ತನೇ ತರಗತಿಯ ಎಲ್ಲಾ ಮಕ್ಕಳಿಗೆ ಉಚಿತವಾಗಿ ಗುಣಮಟ್ಟದ ಪಠ್ಯಪುಸ್ತಕ ಹಾಗೂ ಕಲಿಕಾ ಸಾಮಾಗ್ರಿಗಳನ್ನು ಒದಗಿಸಲಾತ್ತಿದೆ. • ಪಠ್ಯಪುಸ್ತಕಗಳೊಂದಿಗೆ ಪಠ್ಯೇತರ ಚಟುವಟಿಕೆಗಳಾದ ಸಂಗೀತ, ಚಿತ್ರಕಲೆ, ಸ್ಪರ್ಧಾ ಮನೋಭಾವ, ಪತ್ರಿಭಾ ಅನ್ವೇಷಣಾ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. • ಸಮುದಾಯದತ್ತ ಕಾರ್ಯಕ್ರಮದ ಮೂಲಕ ಶಾಲಾ ಅಭಿವೃದ್ಧಿಗೆ ಸಮುದಾಯದ ಸಹಕಾರ ಪಡೆದು ವಿದ್ಯಾರ್ಥಿಗಳ ಸಾಮಾಜಿಕರಣಕ್ಕಾಗಿ ಪೂರಕ ವಾತಾವರಣವನ್ನು ರೂಪಿಸಲಾಗುತ್ತಿದೆ. • TALP ಕಾರ್ಯಕ್ರಮದ ಮೂಲಕ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸ್ಮಾರ್ಟ್ ತರಗತಿ ಸೌಲಭ್ಯ ಒದಗಿಸಲಾಗಿದೆ. • ಶೇ 51 ರಷ್ಟು (2351) ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್ ಒದಗಿಸಲಾಗಿದೆ. • ಶಿಕ್ಷಕರುಗಳಿಗೆ ಬೋಧನೆಯನ್ನು ಆಕರ್ಷಕವಾಗಿಸಲು 25000 ಕ್ಕೂ ಅಧಿಕ ಇ-ಸಂಪನ್ಮೂಲಗಳನ್ನು ದೀಕ್ಷಾ ಪೋರ್ಟಲ್‌ನಲ್ಲಿ ಅಳವಡಿಸಿದೆ. • ವಿವಿಧ ಮಾಧ್ಯಮಗಳ 4800 ಕ್ಕೂ ಅಧಿಕ ವೀಡಿಯೋ ಪಾಠಗಳನ್ನು ದೀಕ್ಷಾ ಪೋರ್ಟಲ್‌ನಲ್ಲಿ ಮತ್ತು ಇಲಾಖೆಯ ಯು-ಟ್ಯೂಬ್ ಚಾನಲ್‌ನಲ್ಲಿ ಅಳವಡಿಸಿದೆ. • ಈ ಸಂಪನ್ಮೂಲಗಳಿಗೆ QR ಕೋಡ್‌ಗಳನ್ನು ಅಳವಡಿಸಿ, ಪಠ್ಯಪುಸ್ತಕಗಳನ್ನು Energize ಮಾಡಲಾಗಿದೆ. • ಒಂದು, ಎರಡು ಮತ್ತು ಮೂರನೇ ತರಗತಿಯಲ್ಲಿ

		ಆಂಗ್ಲಭಾಷಾ ಬೋಧನೆ ಮಾಡುವ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. • ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನಿಷ್ಠಾ-ವೃತ್ತಿಪರ ಬೆಳವಣಿಗೆ ತರಬೇತಿ ನೀಡಲಾಗಿದೆ. ವಿಜ್ಞಾನ ಮತ್ತು ಗಣಿತ ಬೋಧಿಸುವ ಪ್ರೌಢಶಾಲಾ ಶಿಕ್ಷಕರಿಗೆ ಭಾರತೀಯ ವಿಜ್ಞಾನ ಸಂಸ್ಥೆಯಿಂದ ತರಬೇತಿ ನೀಡಲಾಗುತ್ತಿದೆ.
ಆ)	ಕಾರ್ಪೋರೇಟ್ ಸಂಸ್ಥೆಗಳಿಂದ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಶಾಲೆಗಳ ಅಭಿವೃದ್ಧಿ ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ;	ಹೌದು ಇದಕ್ಕಾಗಿಯೇ "ನಮ್ಮ ಶಾಲೆ ನನ್ನ ಕೊಡುಗೆ" ಹೆಸರಿನಲ್ಲಿ ಸೊಸೈಟಿಯನ್ನು ಸ್ಥಾಪಿಸಲಾಗಿದೆ. ಈ ಸಂಬಂಧ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ: ಇಪಿ 2ಎಂ.ಹೆಚ್.ಟಿ.2020ರ ಪತ್ರಿಯನ್ನು ಲಗತ್ತಿಸಿದೆ.
ಇ)	ಈಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಯಾವಾಗ? (ವಿವರ ನೀಡುವುದು)	"ನಮ್ಮ ಶಾಲೆ ನನ್ನ ಕೊಡುಗೆ" ಯೋಜನೆಯನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ, "ನಮ್ಮ ಶಾಲೆ ನನ್ನ ಕೊಡುಗೆ" ಸೊಸೈಟಿಯನ್ನು ಲೋಕಾರ್ಪಣೆಗೊಳಿಸಲಾಗಿದೆ. ಇದನ್ನು ಜನಸ್ನೇಹಿಗೊಳಿಸಲು ಮೊಬೈಲ್ ತಂತ್ರಾಂಶ(App)ವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಸದ್ಯದಲ್ಲಿಯೇ ಲೋಕಾರ್ಪಣೆ ಮಾಡಲಾಗುವುದು

(ಬಿ.ಸಿ. ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 02 ಎಂ.ಹೆಚ್.ಟಿ /2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:28.05.2021

ತಿದ್ದುಪಡಿ ಆದೇಶ

****

ಇದೇ ಸಮ ಸಂಖ್ಯೆ: ಇಪಿ 02 ಎಂ.ಹೆಚ್.ಟಿ /2020, ಸರ್ಕಾರದ ಆದೇಶ ದಿನಾಂಕ:02.07.2020ರ ಆದೇಶ ಕ್ರಮಗಳು /ಷರತ್ತಿನ ಭಾಗದ ಮೂರನೇ, ನಾಲ್ಕನೇ ಮತ್ತು ಆರನೇ ವಾಕ್ಯ ವೃಂದದಲ್ಲಿ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು

ಆದೇಶದ ಕ್ರಮಗಳು /ಷರತ್ತಿನ ಭಾಗ	ಪ್ರಸ್ತುತ ಇರುವುದು	ತಿದ್ದಿ ಓದಿಕೊಳ್ಳುವುದು
03.	ಮೇಲೆ ಓದಲಾದ (4) ಆರ್ಥಿಕ ಇಲಾಖೆಯ ಆದೇಶದಲ್ಲಿನ ವಿಧಾನಗಳನ್ನು ಪಾಲಿಸಿ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ಮೂಲ ಉದ್ದೇಶದಿಂದ ದಾನಿಗಳಿಂದ ದೇಣಿಗೆಗಳನ್ನು ಸ್ವೀಕರಿಸಿ ನಿರ್ವಹಿಸಲು ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪ್ರತ್ಯೇಕವಾಗಿ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ಹೆಸರಿನಲ್ಲಿ ಜಂಟಿ ಖಾತೆಯನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆರೆಯಲು ಅನುಮತಿಸಿದೆ.	ಮೇಲೆ ಓದಲಾದ (4) ಆರ್ಥಿಕ ಇಲಾಖೆಯ ಆದೇಶದಲ್ಲಿನ ವಿಧಾನಗಳನ್ನು ಪಾಲಿಸಿ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ಮೂಲ ಉದ್ದೇಶದಿಂದ ದಾನಿಗಳಿಂದ ದೇಣಿಗೆಗಳನ್ನು ಸ್ವೀಕರಿಸಿ ನಿರ್ವಹಿಸಲು ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪ್ರತ್ಯೇಕವಾಗಿ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ಹೆಸರಿನಲ್ಲಿ ಜಂಟಿ ಖಾತೆಯನ್ನು ಷೆಡ್ಯೂಲ್ ಕಮರ್ಷಿಯಲ್ ಬ್ಯಾಂಕ್ ಮೇ॥ ಜನಸ್ಮಾಲ್ ಫೈನಾನ್ಸ್ ಬ್ಯಾಂಕಿನಲ್ಲಿ ತೆರೆಯಲು ಅನುಮತಿಸಿದೆ.

04.	ದೇಣಿಗೆಗಳನ್ನು ಕೇಂದ್ರೀಕೃತವಾಗಿ ಒಂದು ಖಾತೆಯಲ್ಲಿ ಸ್ವೀಕರಿಸಿ ಅದನ್ನು ಅಯಾ ಶಾಲೆಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕಾಗಿರುವುದರಿಂದ ಆಯುಕ್ತರ ಕಛೇರಿಯಲ್ಲಿ ಸ್ಥಾಪಿಸಲಾಗುವ ಸೊಸೈಟಿ ಹೆಸರಿನಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆರೆಯಲು ಅನುಮತಿಸಿದೆ.	ದೇಣಿಗೆಗಳನ್ನು ಕೇಂದ್ರೀಕೃತವಾಗಿ ಒಂದು ಖಾತೆಯಲ್ಲಿ ಸ್ವೀಕರಿಸಿ ಅದನ್ನು ಅಯಾ ಶಾಲೆಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕಾಗಿರುವುದರಿಂದ ಆಯುಕ್ತರಕಛೇರಿಯಲ್ಲಿ ಸ್ಥಾಪಿಸಲಾಗುವ ಸೊಸೈಟಿ ಹೆಸರಿನಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಷೆಡ್ಯೂಲ್ ಕಮರ್ಷಿಯಲ್ ಬ್ಯಾಂಕ್ ಮೇ॥ ಜನಸ್ಮಾಲ್ ಫೈನಾನ್ಸ್ ಬ್ಯಾಂಕಿನಲ್ಲಿ ತೆರೆಯಲು ಅನುಮತಿಸಿದೆ.
06	ಮೇಲೆ ಓದಲಾದ (4) ಆರ್ಥಿಕ ಇಲಾಖೆಯ ಆದೇಶದಲ್ಲಿನ ವಿಧಾನಗಳನ್ನು ಅನುಸರಿಸಿ ರಾಷ್ಟ್ರೀಕೃತ ಬ್ಯಾಂಕ್ ನ್ನು ನೋಡಲ್ ಬ್ಯಾಂಕ್ ಆಗಿ ಹೊಂದುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ನಿರ್ಧರಿಸತಕ್ಕದ್ದು.	ಆರ್ಥಿಕ ಇಲಾಖೆಯ ಆದೇಶದ ಸಂಖ್ಯೆ: FD 172Exp/8/2020, EP 02 MHT 2020 ದಿನಾಂಕ:07.10.2020 ರಲ್ಲಿನ ವಿಧಾನಗಳನ್ನು ಅನುಸರಿಸಿ ಷೆಡ್ಯೂಲ್ ಕಮರ್ಷಿಯಲ್ ಬ್ಯಾಂಕ್ ಮೇ॥ ಜನಸ್ಮಾಲ್ ಫೈನಾನ್ಸ್ ನೋಡಲ್ ಬ್ಯಾಂಕ್ ನ್ನು ನೋಡಲ್ ಬ್ಯಾಂಕ್ ಆಗಿ ಪರಿಗಣಿಸತಕ್ಕದ್ದು.

ಉಳಿದಂತೆ ದಿನಾಂಕ: 02.07.2020ರ ಆದೇಶದಲ್ಲಿನ ಎಲ್ಲಾ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ. ಸದರಿ ತಿದ್ದುಪಡಿ ಆದೇಶವನ್ನು ಆರ್ಥಿಕ ಇಲಾಖೆ ವೆಚ್ಚ (7&8) ರವರ ಪತ್ರ ಸಂಖ್ಯೆ: FD 172Exp/8/2020, EP 02 MHT 2020 ದಿನಾಂಕ:07.10.2020 ಆದೇಶ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಆರ್.ಎಸ್.ನಾಥನ್) 26.05.2021

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ)

ಪ್ರತಿ

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.

2. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರ ಮಾಹಿತಿಗಾಗಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ(7&8)ವಿಧಾನಸೌಧ, ಬೆಂಗಳೂರು
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
5. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ

ಮಾಹಿತಿಗಾಗಿ

1. ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ: ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗಾಗಿ ದಾನಿಗಳಿಂದ, ಹಳೆಯ ವಿದ್ಯಾರ್ಥಿಗಳಿಂದ, ಖಾಸಗಿ ಸಂಘಸಂಸ್ಥೆ, ಉದ್ಯಮ ಹಾಗೂ ಸಮುದಾಯದಿಂದ ದೇಣಿಗೆ/ಕೊಡುಗೆಗಳನ್ನು ಪಡೆಯಲು ಪೂರಕವಾಗಿ "ನಮ್ಮ ಶಾಲೆ ನನ್ನ ಕೊಡುಗೆ" ಮೊಬೈಲ್ ಆಪ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಏಕ ಕಡತ ಸಂಖ್ಯೆ:ಪಿ.ಆರ್.ಓ/ಶಾ.ದ.ಯೋ/01/2019/20
2. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗಳ ರಾಜ್ಯ ಸಮಿತಿ ಸಭೆಯ ನಿರ್ಣಯಗಳು, ದಿನಾಂಕ:07.01.2020.
3. ಆರ್ಥಿಕ ಇಲಾಖೆಯ ಕಡತ ಸಂಖ್ಯೆ:ಆಇ/172/ವೆಚ್ಚ-8/2020, ದಿನಾಂಕ:19.06.2020
4. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ/5/ಟಿಎಆರ್/2017, ದಿನಾಂಕ:30.01.2017

*****

ಪ್ರಸ್ತಾವನೆ:-

ಮೇಲೆ ಓದಲಾದ (1)ರಲ್ಲಿ ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗಾಗಿ ದಾನಿಗಳಿಂದ, ಹಳೆಯ ವಿದ್ಯಾರ್ಥಿಗಳಿಂದ, ಖಾಸಗಿ ಸಂಘಸಂಸ್ಥೆ, ಉದ್ಯಮ ಹಾಗೂ ಸಮುದಾಯದಿಂದ ದೇಣಿಗೆ/ಕೊಡುಗೆಗಳನ್ನು ಪಡೆಯಲು ಪೂರಕವಾಗಿ "ನಮ್ಮ ಶಾಲೆ ನನ್ನ ಕೊಡುಗೆ-ಮೊಬೈಲ್" ಆಪ್ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಿ ಮುಂದಿನ ಅಂಶಗಳ ಬಗ್ಗೆ ಸರ್ಕಾರದ ಅನುಮೋದನೆ ಕೋರಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

- ದೇಣಿಗೆ ಸಂಗ್ರಹಕ್ಕಾಗಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪ್ರತ್ಯೇಕವಾಗಿ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಜಂಟಿ ಖಾತೆ ನಿರ್ವಹಣೆ.

- ಮಾನ್ಯ ಶಿಕ್ಷಣ ಸಚಿವರ ಗೌರವಾಧ್ಯಕ್ಷತೆಯಲ್ಲಿ ಆಯುಕ್ತರ ಕಛೇರಿಯಲ್ಲಿ ಸೊಸೈಟಿಯನ್ನು ಸ್ಥಾಪಿಸಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು.
- IT Act Section 80G ಅಡಿಯಲ್ಲಿ ವಿನಾಯ್ತಿ ಪ್ರಮಾಣ ಪತ್ರವನ್ನು ಸೊಸೈಟಿಯಡಿಯಲ್ಲಿ ನೀಡಲು ಅವಕಾಶ ಕಲ್ಪಿಸುವುದು.
- ಶಾಲೆಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳ ಮಾನದಂಡವನ್ನು ನಿಗಧಿಪಡಿಸಿ ಅದಕ್ಕೆ ಅನುಗುಣವಾಗಿ ಶಾಲಾ ಅಗತ್ಯತೆಗಳನ್ನು ಪ್ರತಿ ಶಾಲೆಯ ಮುಖ್ಯ ಶಿಕ್ಷಕರು ಬೇಡಿಕೆ ಪಟ್ಟಿಯಲ್ಲಿ ನಮೂದಿಸುವಂತೆ ಸೂಚನೆ ನೀಡಲಾಗುವುದು.
- ಸಿವಿಲ್ ಕಾಮಗಾರಿ, ಗಣಕ ಯಂತ್ರ, ಪ್ರಿಂಟರ್ ಸ್ಕ್ಯಾನರ್, ಹಾಗೂ ಈ ರೀತಿಯ ಇತರೆ ದೇಣಿಗೆಗೆ ಕೇಂದ್ರ ಕಛೇರಿಯಲ್ಲಿ Specification ಗಳನ್ನು ನಿಗಧಿಗೊಳಿಸಲಾಗುವುದು. ಇಂತಹ ದೇಣಿಗೆಯನ್ನು Standard Specification ಅನ್ವಯ ಖರೀದಿಸಲು ಸೂಚನೆ ನೀಡಲಾಗುವುದು.
- K.T.P.P. Act ಅಡಿಯಲ್ಲಿ ರೂ. ಒಂದು ಲಕ್ಷ ಮೊತ್ತ ಮೀರಿದ ಖರೀದಿ ಪ್ರಕ್ರಿಯೆಯನ್ನು ಟೆಂಡರ್ ಮೂಲಕ ಮತ್ತು ರೂ. ಒಂದು ಲಕ್ಷಕ್ಕಿಂತ ಕಡಿಮೆ ಮೊತ್ತದ ಖರೀದಿ ಪ್ರಕ್ರಿಯೆಯನ್ನು ಕೊಟೇಷನ್ ಮೂಲಕ ನಿರ್ವಹಿಸಬೇಕಿರುತ್ತದೆ. ಶಾಲಾ ಹಂತದಲ್ಲಿ ಸಂಗ್ರಹವಾಗುವ ದೇಣಿಗೆಗೆ K.T.P.P. Act ಅಡಿಯಲ್ಲಿ ರೂ. ಐದು ಲಕ್ಷದ ವರೆಗೆ ಕೊಟೇಷನ್ ಮೂಲಕ ಖರೀದಿ ಪ್ರಕ್ರಿಯೆನ್ನು ವಿಸ್ತರಿಸಲು ಅನುಮತಿಗಾಗಿ ಆರ್ಥಿಕ ಇಲಾಖೆಯ ಅನುಮೋದನೆ ಪಡೆದು ಶಾಲಾ ಮುಖ್ಯಶಿಕ್ಷಕರ ಹಂತದ ಖರೀದಿ ಪ್ರಕ್ರಿಯೆ ಸರಳಗೊಳಿಸುವುದು.
- ದಾನಿಗಳು ನೀಡುವ ಪ್ರತಿ ದೇಣಿಗೆಗೆ ಅದರ ಸ್ವರೂಪಕ್ಕೆ ಅನುಗುಣವಾಗಿ ಕಾಲಮಿತಿಯನ್ನು ನಿಗಧಿಗೊಳಿಸಲಾಗುವುದು.

ಮೇಲೆ ಓದಲಾದ (2)ರಲ್ಲಿ ಶಾಲಾ ದತ್ತು ಯೋಜನೆಗೆ ಪೂರಕವಾಗಿ ಸಮುದಾಯ ಸ್ನೇಹಿ "ನಮ್ಮ ಶಾಲೆ ನನ್ನ ಕೊಡುಗೆ-ಮೊಬೈಲ್ ಆಪ್" ಅಭಿವೃದ್ಧಿಗೆ ಅಗತ್ಯವಾದ ಅನುದಾನ ರೂ.146ಲಕ್ಷಗಳನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ಬಳಸಿಕೊಳ್ಳಲು ದಿನಾಂಕ:07.01.2020ರಂದು ನಡೆದ ನಿಧಿಗಳ ರಾಜ್ಯ ಸಮಿತಿ ಸಭೆಯಲ್ಲಿ ಅನುಮೋದಿಸಲ್ಪಟ್ಟಿದೆ.

ಮೇಲೆ ಓದಲಾದ (3)ರಲ್ಲಿ ಆರ್ಥಿಕ ಇಲಾಖೆಯು ಶಾಲಾ ದತ್ತು ಯೋಜನೆಯ "ನಮ್ಮ ಶಾಲೆ ನನ್ನ ಕೊಡುಗೆ–ಮೊಬೈಲ್ ಆಪ್" ಅಭಿವೃದ್ಧಿಪಡಿಸುವ ಆಡಳಿತ ಇಲಾಖೆಯ ಪ್ರಸ್ತಾವನೆಗೆ ಸಂಬಂಧಿಸಿದಂತೆ ನೀಡಿರುವ ಅಭಿಪ್ರಾಯಗಳನ್ನು ಪರಿಶೀಲಿಸಲಾಗಿದೆ.

ಮೇಲೆ ಓದಲಾದ (4)ರಲ್ಲಿ ಆರ್ಥಿಕ ಇಲಾಖೆಯು ಸಾರ್ವಜನಿಕ ಉದ್ದೇಶದಿಂದ ಬ್ಯಾಂಕ್ ಖಾತೆಗಳನ್ನು ತೆರೆಯುವ ಹಾಗೂ ನಿರ್ವಹಿಸುವ ಬಗ್ಗೆ ನೀಡಿರುವ ನಿರ್ದೇಶನಗಳನ್ನು ಪರಿಶೀಲಿಸಲಾಗಿದೆ.

ಮೇಲಿನ ಪ್ರಸ್ತಾವನೆಯ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 2 ಎಂ.ಹೆಚ್.ಟಿ. 2020, ಬೆಂಗಳೂರು, ದಿನಾಂಕ:02.07.2020

ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗಾಗಿ ದಾನಿಗಳಿಂದ ಹಳೆಯ ವಿದ್ಯಾರ್ಥಿಗಳಿಂದ ಖಾಸಗಿ ಸಂಘ ಸಂಸ್ಥೆಗಳಿಂದ, ಉದ್ಯಮ ಹಾಗೂ ಸಮುದಾಯದಿಂದ ದೇಣಿಗೆ ಕೊಡುಗೆಗಳನ್ನು ಪಡೆಯಲು ಪೂರಕವಾಗಿ ಸಮುದಾಯ ಸ್ನೇಹಿ **'ನಮ್ಮ ಶಾಲೆ ನನ್ನ ಕೊಡುಗೆ–ಮೊಬೈಲ್ ಆಪ್'** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರೂ.146.00ಲಕ್ಷಗಳನ್ನು ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ಉಪಯೋಗಿಸಲು ಕೆಳಕಂಡ ಕ್ರಮ ಹಾಗೂ ಷರತ್ತುಗೊಳಪಟ್ಟು **ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿಸಿ ಆದೇಶಿಸಿದೆ.**

<u>ಕ್ರಮಗಳು/ಷರತ್ತುಗಳು:–</u>

1. ಸರ್ಕಾರಿ ಶಾಲೆಗಳಿಗೆ ದೇಣಿಗೆ ಸಂಗ್ರಹಿಸುವ ಉದ್ದೇಶದಿಂದ ರೂಪಿಸಲಾಗಿರುವ ಮೊಬೈಲ್ ಆ್ಯಪ್ ನ್ನು **'ನಮ್ಮ ಶಾಲೆ ನನ್ನ ಕೊಡುಗೆ'** ಎಂಬ ಶೀರ್ಷಿಕೆಯಿಂದ ಪ್ರಚಾರಗೊಳಿಸಲು ಇಲಾಖಾ ಸುತ್ತೋಲೆ ಹೊರಡಿಸತಕ್ಕದ್ದು.
2. **'ನಮ್ಮ ಶಾಲೆ ನನ್ನ ಕೊಡುಗೆ–ಮೊಬೈಲ್ ಆ್ಯಪ್"** ಅಭಿವೃದ್ಧಿಗೆ ಹಾಗೂ ಅನುಷ್ಠಾನಕ್ಕೆ ರೂ.146.00ಲಕ್ಷಗಳನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕ್ಷೇಮಾಭಿವೃದ್ಧಿ ನಿಧಿಯಿಂದ ಬಳಸತಕ್ಕದ್ದು.
3. ಮೇಲೆ ಓದಲಾದ (4)ರ ಆರ್ಥಿಕ ಇಲಾಖೆಯ ಆದೇಶದಲ್ಲಿನ ವಿಧಾನಗಳನ್ನು ಪಾಲಿಸಿ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ಮೂಲ ಉದ್ದೇಶದಿಂದ ದಾನಿಗಳಿಂದ ದೇಣಿಗೆಗಳನ್ನು ಸ್ವೀಕರಿಸಿ ನಿರ್ವಹಿಸಲು ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪ್ರತ್ಯೇಕವಾಗಿ ಮುಖ್ಯ ಶಿಕ್ಷಕರು

ಮತ್ತು ಎಸ್.ಡಿ.ಎಂ.ಸಿ ಹೆಸರಿನಲ್ಲಿ ಜಂಟಿ ಖಾತೆಯನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆರೆಯಲು ಅನುಮತಿಸಿದೆ.

4. ದೇಣಿಗೆಗಳನ್ನು ಕೇಂದ್ರೀಕೃತವಾಗಿ ಒಂದು ಖಾತೆಯಲ್ಲಿ ಸ್ವೀಕರಿಸಿ ಅದನ್ನು ಆಯಾ ಶಾಲೆಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕಾಗಿರುವುದರಿಂದ ಆಯುಕ್ತರ ಕಛೇರಿಯಲ್ಲಿ ಸ್ಥಾಪಿಸಲಾಗುವ ಸೊಸೈಟಿ ಹೆಸರಿನಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆರೆಯಲು ಅನುಮತಿಸಿದೆ.

5. ದಾನಿಗಳಿಂದ, ಹಳೆಯ ವಿದ್ಯಾರ್ಥಿಗಳಿಂದ, ಖಾಸಗಿ ಸಂಘಸಂಸ್ಥೆ, ಉದ್ಯಮ ಹಾಗೂ ಸಮುದಾಯದಿಂದ ದೇಣಿಗೆ/ಕೊಡುಗೆಗಳನ್ನು ಸೊಸೈಟಿಯ ಮೂಲಕ ಸ್ವೀಕರಿಸಿದರೆ ಆದಾಯ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಆದಾಯ ತೆರಿಗೆ ಇಲಾಖೆಯೊಂದಿಗೆ ನೇರವಾಗಿ ವ್ಯವಹರಿಸಿ, ದಾನಿಗಳಿಗೆ 80G ಅಡಿಯಲ್ಲಿ ಆದಾಯ ತೆರಿಗೆ ವಿನಾಯಿತಿಯನ್ನು ಪಡೆಯಲು ಕ್ರಮವಹಿಸತಕ್ಕದ್ದು.

6. ಮೇಲೆ ಓದಲಾದ (4)ರ ಆರ್ಥಿಕ ಇಲಾಖೆಯ ಆದೇಶದಲ್ಲಿನ ವಿಧಾನಗಳನ್ನು ಅನುಸರಿಸಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ನ್ನು ನೋಡಲ್ ಬ್ಯಾಂಕ್ ಆಗಿ ಹೊಂದುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ನಿರ್ಧರಿಸತಕ್ಕದ್ದು.

7. ಆರ್ಥಿಕ ಇಲಾಖೆಯು K.T.P.P. Act ಸೆಕ್ಷನ್ 4ರಡಿಯಲ್ಲಿ ರೂ.5.00ಲಕ್ಷಗಳವರೆಗಿನ ಸರಕು/ಸೇವೆ ಸಂಗ್ರಹಣೆಗೆ ವಿನಾಯಿತಿ ನೀಡಿ ತಿದ್ದುಪಡಿ ಮಾಡಲಾಗಿದೆ. ಸದರಿ ತಿದ್ದುಪಡಿಯನ್ವಯ, ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

8. ಶಿಕ್ಷಣ ಇಲಾಖೆಯ ಯಾವುದೇ ಮುಂದುವರಿದ ಯೋಜನಾ ಕಾರ್ಯಕ್ರಮಗಳಿಗೆ ಸಂಬಂಧಿಸಿಂತೆ ಬಿಡುಗಡೆಯಾದ ಮೊತ್ತವನ್ನು "ನಮ್ಮ ಶಾಲೆ ನನ್ನ ಕೊಡುಗೆ-ಮೊಬೈಲ್ ಆ್ಯಪ್" ಕಾರ್ಯಕ್ರಮಕ್ಕಾಗಿ ತೆರೆದಿರುವ ಖಾತೆಗಳಿಗೆ ಜಮೆ ಮಾಡತಕ್ಕದ್ದಲ್ಲ. ಹಾಗೂ ಕೇವಲ ದಾನಿಗಳಿಂದ ಸ್ವೀಕರಿಸುವ ಹಣವನ್ನು ಮಾತ್ರ ಈ ಬ್ಯಾಂಕ್ ಖಾತೆಗಳಲ್ಲಿಟ್ಟು ಆರ್ಥಿಕ ಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು.

9. ಸರ್ಕಾರಿ ಶಾಲಾ ದತ್ತು ಯೋಜನೆಗಾಗಿ ರೂಪಿಸಿರುವ 'ನಮ್ಮ ಶಾಲೆ ನನ್ನ ಕೊಡುಗೆ-ಮೊಬೈಲ್ ಆ್ಯಪ್' ನ ಬಗ್ಗೆ ಸರ್ಕಾರಿ ಹಾಗೂ ಖಾಸಗೀ ಸಮೂಹ ಸಂವಹನ ಮಾಧ್ಯಮಗಳ ಮೂಲಕ ಮತ್ತು ಇಲಾಖಾ ಸುತ್ತೋಲೆಯ ಮೂಲಕ ಸಮುದಾಯ ಹಾಗೂ ಇಲಾಖಾ ಸಿಬ್ಬಂದಿಗೆ ಸಮಗ್ರ ಮಾಹಿತಿ ಲಭ್ಯವಾಗುವಂತೆ ಕ್ರಮವಹಿಸತಕ್ಕದ್ದು.

10. ದಾನಿಗಳಿಂದ ಸಂಗ್ರಹಿಸುವ ದೇಣಿಗೆ, ಬಳಕೆ, ವೆಚ್ಚ, ಉಪಯೋಗ ಹಾಗೂ ನಿರ್ವಹಣೆಗಳು ಪಾರದರ್ಶಕವಾಗಿರುವಂತೆ ಸೂಕ್ತ ಲೆಕ್ಕ ಪತ್ರಗಳನ್ನು ನಿರ್ವಹಿಸತಕ್ಕದ್ದು.
11. TAP ಸಭೆಯಲ್ಲಿ ಅನುಮೋದಿಸಲ್ಪಟ್ಟ ಗಣಕಯಂತ್ರ, ಪ್ರಿಂಟರ್, ಸ್ಕ್ಯಾನರ್ ಮುಂತಾದವುಗಳ ಬಗ್ಗೆ ನಿರ್ದಿಷ್ಟತೆ/ Specification ಗಳಿಗೆ ಅನುಗುಣವಾಗಿ ನಿಗಧಿಪಡಿಸಿದ Standard Specification ಗಳ ಅನ್ವಯ ವ್ಯವಹರಿಸಲು ಕ್ರಮವಹಿಸತಕ್ಕದ್ದು.
12. ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಕಛೇರಿಯಲ್ಲಿನ ಕಟ್ಟಡಕಾಮಗಾರಿ ವಿಭಾಗದಲ್ಲಿನ ಅಭಿಯಂತರರ ಮೂಲಕ ನಿರ್ದಿಷ್ಟತೆಗಳನ್ನು ಹಾಗೂ ಕಟ್ಟಡ ವಿನ್ಯಾಸ(Type Design) ಪ್ರಕಾರ ನಿಗಧಿಪಡಿಸಿ ಕ್ರಮವಹಿಸತಕ್ಕದ್ದು.
13. ಸದರಿ ಕಾರ್ಯಕ್ರಮದ ಪ್ರಗತಿಯ ತ್ರೈಮಾಸಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಕಡತ ಸಂಖ್ಯೆ:ಆಇ/172/ವೆಚ್ಚ-8/2020, ದಿನಾಂಕ:19.06.2020 ಹಾಗೂ ಆದೇಶ ಸಂಖ್ಯೆ: ಎಫ್.ಡಿ 02 ಟಿಎಫ್‌ಪಿ 2020 ದಿನಾಂಕ:30.05.2020 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

02.07.2020

(ಎಸ್.ಆರ್.ಎಸ್.ನಾಥನ್)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

02/7/2020

ಪ್ರತಿ:

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು-01
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು-01
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ

5. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ, ಬೆಂಗಳೂರು–83
6. ನಿರ್ದೇಶಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
8. ಕಛೇರಿ ಪ್ರತಿ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಶಿಕ್ಷಣ ಸಚಿವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರ ಆಪ್ತ ಕಾರ್ಯದರ್ಶಿಗಳು ವಿಧಾನಸೌಧ, ಬೆಂಗಳೂರು
2. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು